# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1275 + 1229 |
| 2 | ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್<br>(ವಿಧಾನ ಸಭೆಯಿಂದ ಚುನಾಯಿತರಾದವರು)<br>ಮತ್ತು ಶ್ರೀ ಹೆಚ್.ಎಸ್.ಗೋಪಿನಾಥ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 19-12-2024 |
| 4 | ಉತ್ತರಿಸುವವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | **ಬೃಹತ್ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯನ್ನು ಈ ಕೆಳಕಂಡಂತೆ ನಿರ್ವಹಿಸಲಾಗುತ್ತಿರುತ್ತದೆ.**<br>1. ಪ್ರಾಥಮಿಕ ಸಂಗ್ರಹಣೆ. – ಪ್ರತಿ ವಾರ್ಡ್‌ಗಳಲ್ಲಿ ಮೈಕ್ರೋ ಪ್ಲಾನ್ ನಂತೆ ಪ್ರಾಥಮಿಕ ಸಂಗ್ರಹಣಾ ವಾಹನಗಳನ್ನು ನಿಯೋಜಿಸಿ ಸಂಗ್ರಹಿಸಲಾಗುತ್ತಿರುತ್ತದೆ.<br>2. ದ್ವಿತೀಯ ಹಂತದ ಸಂಗ್ರಹಣೆ ಮತ್ತು ವಿಲೇವಾರಿ ಟ್ರಾನ್ಸ್‌ಫರ್ ಸ್ಟೇಷನ್‌ಗಳು ಅಥವಾ ಕಾಂಪ್ಯಾಕ್ಟರ್ ಗಳ ಮುಖೇನ ಸಂಗ್ರಹಿಸಿ ವಿಲೇವಾರಿ ಮಾಡಲಾಗುತ್ತದೆ.<br>3. ಘನತ್ಯಾಜ್ಯ ಸಂಸ್ಕರಣೆ – ಪಾಲಿಕೆಯ ವ್ಯಾಪ್ತಿಯಲ್ಲಿ ವಿಂಗಡಿತ ರೂಪದಲ್ಲಿ ಸಂಗ್ರಹವಾಗುತ್ತಿರುವ ತ್ಯಾಜ್ಯವನ್ನು 8 ಕೇಂದ್ರೀಕೃತ ಘಟಕಗಳು 13 ಬಯೋಮೆಥನೈಜೇಷನ್ ಘಟಕಗಳು, ಒಣತ್ಯಾಜ್ಯ ಸಂಗ್ರಹಣಾ ಘಟಕಗಳು, ನೈರ್ಮಲ್ಯ ತ್ಯಾಜ್ಯ ಸಂಸ್ಕರಣಾ ಘಟಕಗಳು ಹಾಗೂ ಭೂಭರ್ತಿ ಸ್ಥಳಗಳ ಮೂಲಕ ವಿಲೇವಾರಿ ಮಾಡಲಾಗುತ್ತಿರುತ್ತದೆ.<br>4. ಪಾಲಿಕೆಯ ವ್ಯಾಪ್ತಿಯಲ್ಲಿ ವಿಂಗಡಿಸದೇ ಇರುವ ತ್ಯಾಜ್ಯ, ರಸ್ತೆಬದಿಯಲ್ಲಿ ಸ್ವಚ್ಛಗೊಳಿಸುವ ತ್ಯಾಜ್ಯ ಮತ್ತು ಇತರೆ ನಿಷ್ಕ್ರೀಯ ತ್ಯಾಜ್ಯವನ್ನು ಭೂಭರ್ತಿ ಘಟಕಗಳಿಗೆ ವಿಲೇವಾರಿ ಮಾಡಲಾಗುತ್ತಿರುತ್ತದೆ.<br>5. ಪಾಲಿಕೆಯ ವ್ಯಾಪ್ತಿಯಲ್ಲಿ 100 ಕೆ.ಜಿ. ಮೇಲ್ಪಟ್ಟು ಉತ್ಪತ್ತಿ ಮಾಡುವ ಉತ್ಪಾದಕರನ್ನು ಬೃಹತ್ ತ್ಯಾಜ್ಯ ಉತ್ಪಾದಕರೆಂದು ವರ್ಗೀಕರಿಸಲಾಗಿದ್ದು, ಸದರಿ ತ್ಯಾಜ್ಯ ಉತ್ಪಾದಕರು ಮೂಲದಲ್ಲಿಯೇ ತ್ಯಾಜ್ಯ ಸಂಸ್ಕರಣೆ ಮಾಡುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ.<br>**6.** ಘನತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಅನುಸರಣೆ ಮಾಡದ ಸಾರ್ವಜನಿಕರಿಗೆ ದಂಡ ವಿಧಿಸಲು ನಿಯಮ ರೂಪಿಸಲಾಗಿರುತ್ತದೆ. ಸದರಿ ಕಾರ್ಯಕ್ಕೆ ಮಾರ್ಷಲ್ ಗಳನ್ನು ನಿಯೋಜಿಸಿಕೊಳ್ಳಲಾಗಿರುತ್ತದೆ. |

..2/-

<table>
<tr>
<td>ಆ)</td>
<td>ಈ ಪಾಲಿಕೆಯಲ್ಲಿ ಘನತ್ಯಾಜ್ಯ ಸಂಸ್ಕರಣೆಗಾಗಿ ನಿರ್ಮಿಸಿರುವ ತ್ಯಾಜ್ಯ ನಿರ್ವಹಣಾ ಘಟಕಗಳೆಷ್ಟು; ತ್ಯಾಜ್ಯ ಶೇಖರಣೆಯಾಗುತ್ತಿರುವ ಸ್ಥಳಗಳಲ್ಲಿ ಸುತ್ತಮುತ್ತಲಿನ ಪರಿಸರ ಮಾಲಿನ್ಯವಾಗುತ್ತಿರುವ ಬಗ್ಗೆ ದೂರುಗಳು ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ: (ವಲಯವಾರು ಸಂಪೂರ್ಣ ಮಾಹಿತಿ ನೀಡುವುದು)</td>
<td rowspan="2">
ಪಾಲಿಕೆಯಲ್ಲಿ 7 ಸಂಸ್ಕರಣಾ ಘಟಕಗಳನ್ನು 2014–15ನೇ ಸಾಲಿನಲ್ಲಿ ಘನತ್ಯಾಜ್ಯ ಸಂಸ್ಕರಣೆಗಾಗಿ ನಿರ್ಮಿಸಲಾಗಿರುತ್ತದೆ. ಈ ಯೋಜನೆಯ ನೋಡಲ್ ಏಜೆನ್ಸಿಯಾದ ಕೆಯುಐಡಿಎಫ್‌ಸಿ ಪ್ರಕಾರ ಸರ್ಕಾರದ ವತಿಯಿಂದ ಖರ್ಚಾದ ಹಣ ರೂ. 323,45,15,183/–
ಘಟಕಗಳಲ್ಲಿ ಸ್ವೀಕರಿಸುತ್ತಿರುವ ಕಸದ ವಿವರ ಹಾಗೂ ಘನತ್ಯಾಜ್ಯ ಸಂಸ್ಕರಣೆಗೆ ಪ್ರತಿ ನಿತ್ಯ ತಗಲುವ ವೆಚ್ಚದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ಘಟಕದ ಹೆಸರು</th><th>ಘಟಕದ ಸಾಮರ್ಥ್ಯ ಮೆ. ಟನ್‌ಗಳಲ್ಲಿ</th><th>ಪ್ರತಿ ದಿವಸ ಹಸಿಕಸ ಸ್ವೀಕರಣೆ ಮೆ. ಟನ್‌ಗಳಲ್ಲಿ</th><th>ಘನತ್ಯಾಜ್ಯ ಸಂಸ್ಕರಣೆಗೆ ಪ್ರತಿ ನಿತ್ಯ ತಗಲುವ ವೆಚ್ಚ (ರೂ. ಗಳಲ್ಲಿ)</th></tr>
<tr><td>1</td><td>ಚಿಕ್ಕನಾಗಮಂಗಲ</td><td>350</td><td>275</td><td>1,80,000/–</td></tr>
<tr><td>2</td><td>ದೊಡ್ಡಬಿದರಕಲ್ಲು</td><td>150</td><td>89</td><td>1,37,439/–</td></tr>
<tr><td>3</td><td>ಕನ್ನಹಳ್ಳಿ – ಮೆ// ಸತಾರಾಂ ಕಂಪನಿ ಯವರಿಗೆ 18.01.2021 ರಲ್ಲಿ ವೇಸ್ಟ್ ಟು ಎನರ್ಜಿ ಸ್ಥಾಪಿಸಲು ಘಟಕವನ್ನು ಹಸ್ತಾಂತರಿಸಲಾಗಿದೆ.</td><td>350</td><td>308</td><td>57,203/–</td></tr>
<tr><td>4</td><td>ಲಿಂಗಧೀರನಹಳ್ಳಿ</td><td>150</td><td>109</td><td>98,167/–</td></tr>
<tr><td>5</td><td>ಸೀಗೆಹಳ್ಳಿ</td><td>120</td><td>115</td><td>1,16,000/–</td></tr>
<tr><td>6</td><td>ಸುಬ್ಬರಾಯನಪಾಳ್ಯ</td><td>150</td><td>72</td><td>50,000/–</td></tr>
<tr><td>7</td><td>ಕೆಸಿಡಿಸಿ (ಸಾಮರ್ಥ್ಯ ಮೇಲ್ದರ್ಜೆಗೇರಿಸಿದೆ)</td><td>350</td><td>192</td><td>1,07,000/–</td></tr>
<tr><td colspan="2">ಒಟ್ಟು</td><td>1620</td><td>1160</td><td></td></tr>
</table>
ಅಲ್ಲದೇ, ಒಂದು ಖಾಸಗಿ ಮಾಲಿಕತ್ವದ (ಮೆ॥ಎಂಎಸ್‌ಜಿಪಿ ಕಂಪನಿ) ಕಸ ಸಂಸ್ಕರಣಾ ಘಟಕ ಕಾರ್ಯನಿರ್ವಹಿಸುತ್ತಿದೆ.
ತ್ಯಾಜ್ಯ ಶೇಖರಣೆಯಾಗಿ ಸಾರ್ವಜನಿಕ ಉಪದ್ರವ ಉಂಟಾಗದಂತೆ ಹಾಗೂ ದೂರಿಗೆ ಎಡೆಮಾಡಿಕೊಡದಂತೆ ಬ್ಲಾಕ್‌ಸ್ಪಾಟ್‌ಗಳನ್ನು ಗುರುತಿಸಿ ಘನತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿದೆ. ಪ್ರತಿ ಎರಡು ವಿಭಾಗಗಳಿಗೆ ಒಬ್ಬರಂತೆ ಸಹಾಯಕ ವ್ಯವಸ್ಥಾಪಕರು ಇದ್ದು ಇವರು ಬ್ಲಾಕ್‌ಸ್ಪಾಟ್‌ಗಳನ್ನು ಗುರುತಿಸಿ ಅಲ್ಲಿನ ಕಸವನ್ನು ಕೂಡಲೆ ತೆರವುಗೊಳಿಸಲು ಕ್ರಮ ವಹಿಸುತ್ತಾರೆ.
</td>
</tr>
<tr>
<td>ಇ)</td>
<td>ಈ ಪಾಲಿಕೆಯಲ್ಲಿ ಘನತ್ಯಾಜ್ಯ ಸಂಸ್ಕರಣೆಗಾಗಿ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ನಿರ್ಮಿಸಲು ಸರ್ಕಾರದ ವತಿಯಿಂದ ಖರ್ಚಾದ ಹಣವೆಷ್ಟು: ಈ ಘಟಕಗಳಲ್ಲಿ ಘನತ್ಯಾಜ್ಯ ಸಂಸ್ಕರಣೆ ಕಾರ್ಯ ನಡೆಯುತ್ತಿದೆಯೇ: ನಡೆಯುತ್ತಿದ್ದಲ್ಲಿ ದಿನನಿತ್ಯ ಎಷ್ಟು ಟನ್‌ಗಳಷ್ಟು ಘನತ್ಯಾಜ್ಯಗಳನ್ನು ಸಂಸ್ಕರಣೆ ಮಾಡಲಾಗುತ್ತಿದೆ: ಸದರಿ ಘಟಕಗಳ ಘನತ್ಯಾಜ್ಯ ಸಂಸ್ಕರಣೆಗೆ ಪ್ರತಿ ನಿತ್ಯ ತಗಲುವ ವೆಚ್ಚವೆಷ್ಟು: ಕಸ ವಿಲೇವಾರಿ ಮಾಡಲು ಟೆಂಡರ್‌ನ್ನು ಯಾವ ಕಂಪನಿ/ ವ್ಯಕ್ತಿಗೆ ನೀಡಲಾಗಿದೆ: (ಘಟಕವಾರು, ವಲಯವಾರು ಸಂಪೂರ್ಣ ಮಾಹಿತಿ ನೀಡುವುದು).</td>
</tr>
</table>

| | | |
|---|---|---|
| ಈ) | ಈ ಸಂಸ್ಕರಣಾ ಘಟಕಗಳಲ್ಲಿ ಸಂಸ್ಕರಣಾ ಕಾರ್ಯ ನಡೆಯದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು: ಘನತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ಸಂಸ್ಕರಣಾ ಕಾರ್ಯ ನಿರ್ವಹಣೆ ಮಾಡದಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಲಯವಾರು ಘಟಕವಾರು, ಸಂಪೂರ್ಣ ಮಾಹಿತಿ ನೀಡುವುದು). | • ಪ್ರಸ್ತುತ ಪಾಲಿಕೆಯ ಮಾಲೀಕತ್ವದಲ್ಲಿ 7 ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಸಂಸ್ಕರಣೆ ಕಾರ್ಯ ಚಾಲನೆಯಲ್ಲಿದೆ.<br>• ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಮೇಯ ಉದ್ಭವಿಸಿರುವುದಿಲ್ಲ. |

**ಸಂಖ್ಯೆ: ನಅಇ 626 ಎಂಎನ್‌ವೈ 2024 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ